ದಿವಾಣಿ ನ್ಯಾಯಾಧೀಶರು ವ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ

ನ್ಯಾಯಾಲಯ, ಶಿಗ್ಗಾಂವ

ಸಿಸಿ ಸಂಖ್ಯೆಃ **1096/2022**

ಪಿರ್ಯಾದಿಃ ಶ್ರೀಮತಿ ಲಕ್ಷ್ಮವ್ವ ಕೋಂ. ಬಸವಣ್ಣೆಪ್ಪ ಹಿಂದಿನಮನಿ,
ವಯಾಃ 65 ವರ್ಷ, ಉದ್ಯೋಗಃ ಮನೆಕೆಲಸ,
ಸಾಃ ಕಡಹಳ್ಳಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ.

ವಿರುದ್ಧ

ಆರೋಪಿಃ ಶ್ರೀಮತಿ ಚನ್ನವ್ವ ಕೋಂ. ಮಲ್ಲನಗೌಡ ಕಂಠೇನವರ,
ವಯಾಃ 58 ವರ್ಷ, ಉದ್ಯೋಗಃ ಮನೆಕೆಲಸ,
ಸಾಃ ಕಡಹಳ್ಳಿ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ.

ಆಪಾದನೆ

ಫಿರ್ಯಾದುದಾರಳು ಮತ್ತು ಆರೋಪಿತಳಾದ ನೀವು ಪರಿಚಯಸ್ಥರಾಗಿದ್ದು, ದಿನಾಂಕಃ 04.03.2022 ರಂದು ಫಿರ್ಯಾದಿದಾರಳಿಂದ ನಿಮ್ಮ ಮನೆಕಟ್ಟಲು ಹಾಗೂ ಗೃಹ ಕೃತ್ಯದ ಸಲುವಾಗಿ ರೂ.3,50,000/- ಗಳಗನ್ನು ಕೈಗಡ ಸಾಲವಾಗಿ ಪಡೆದಿದ್ದು, ಸದರಿ ಹಣವನ್ನು 2 ತಿಂಗಳೊಳಗೆ ಮರುಪಾವತಿಸುವುದಾಗಿ ಹೇಳಿದ್ದು, ಸದರಿ ಹಣದ ಮರುಪಾವತಿಗಾಗಿ ಪಿರ್ಯಾದಿಯವರು ನಿಮ್ಮನ್ನು ಕೇಳಿದ್ದು ನೀವು ದಿನಾಂಕಃ 21.06.2022 ರಂದು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಹಿರೇಬೆಂಡಿಗೇರಿ ಶಾಖೆ, ಬ್ಯಾಂಕ್ ಚೆಕ್ ಸಂಖ್ಯೆಃ 036833 ನ್ನು ರೂ.3,50,000/- ಗಳಿಗೆ ಫಿರ್ಯಾದಿದಾರಳಿಗೆ ನೀಡಿದ್ದು, ಸದರಿ ಚೆಕ್‌ನ್ನು ಕೆವಿಜ್ ಬ್ಯಾಂಕ್, ಹಿರೇಬೆಂಡಿಗೇರಿ ಶಾಖೆಯಲ್ಲಿ ದಿನಾಂಕಃ 23.06.2022 ರಂದು ಹಾಜರುಪಡಿಸಿದಾಗ ದಿನಾಂಕಃ 23.06.2022 ರಂದು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂಬ ಹಿಂಬರಹದೊಂದಿಗೆ ಅಮಾನ್ಯವಾಗಿರುತ್ತದೆ ನಂತರ ದಿನಾಂಕಃ 27.06.2022 ರಂದು ಕಾನೂನು ತಿಳುವಳಿಕೆ ಪತ್ರ ನಿಮಗೆ ನೀಡಿದ್ದು ಅದನ್ನು ನೀವು ಸ್ವೀಕರಿಸಿದ್ದು ದಿನಾಂಕಃ 18.07.2022 ರಂದು ನೀವು ಪ್ರತ್ಯುತ್ತರ ನೀಡಿದ್ದು ಹಾಗೂ ನೀವು ಹಣವನ್ನು ಮರುಪಾವತಿ ಮಾಡದೆ ವರ್ಗಾವಣಾ ಅಧಿನಿಯಮ 1881 ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಪ್ರಶ್ನೆ 1. ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ ಆರೋಪಿತಳು

ಪ್ರಶ್ನೆ 2. ನೀವು ಮೇಲ್ಕಂಡ ಆರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಛಿಸುತ್ತೀರಾ ಅಥವಾ ನಿಮ್ಮ ಪರ ಸಾಕ್ಷ್ಯ ಇದೆಯಾ?

ಉತ್ತರಃ ಆರೋಪಿತಳು

(ಮೇಲ್ಕಂಡ ಆಪಾದನೆಯನ್ನು ಆರೋಪಿತಳಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆತನು ನೀಡಿದ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ದಿಃ 27.07.2024 ರಂದು ಯಥಾವತ್ತಾಗಿ ದಾಖಲಿಸಿರುತ್ತೇನೆ.)

ಸ್ಥಳಃ ಶಿಗ್ಗಾಂವ
ದಿನಾಂಕಃ 27.07.2024

ದಿವಾಣಿ ನ್ಯಾಯಾಧೀಶರು
ವ ಜೆಎಂಎಫ್‌ಸಿ., ಶಿಗ್ಗಾಂವ.